

ತಾಯಿಯ ಹಿಂಡನ್ನು ತೊರೆದು ಅಬ್ಬೇಪಾರಿಯಾಗುವ ಗಂಡು ಒಬ್ಬಂಟಿಯಾಗಿ ಅಲೆದು 'ಒಂಟಿ ಸಲಗ' ಎಂಬ ಬಿರುದು ಗಳಿಸುತ್ತಾನೆ. ಕಿರಿ ವಯಸ್ಸಿನ ಆನೆಗಳಿಗೆ ತಾಯಿ ಎಲ್ಲಾ ವಿದ್ಯೆ ಕಲಿಸುತ್ತಾಳೆ. ಕಾಡಲ್ಲಿ ಮೇವು ತಲಾಶ್ ಮಾಡುವ ರೀತಿ, ನೀರಿನ ಸೆಲೆಗಳ ಪರಿಚಯ, ಹಣ್ಣಿನ ಗಿಡಗಳ ಮಾಹಿತಿ, ಕಾಡಲ್ಲಿ ಓಡಾಡಬೇಕಾದ ದಾರಿಯ ಪರಿಚಯದ ಜೊತೆಗೆ ಬದುಕುವ ಸಕಲ ಕೌಶಲಗಳನ್ನು ಪರಿಚಯಿಸುತ್ತಾಳೆ.

ಒಂದು ದಿನ ಮಗಳು ಸೂಫಿಯ ಜೊತೆ ಕಾಡಿನಲ್ಲಿ ಹೊರಟಿದ್ದೆ. ನಾವು ಹುಡುಕುತ್ತಿದ್ದ ಹುಲಿಯಾಗಲಿ, ಅದರ ಮರಿಗಳಾಗಲಿ ಆ ದಿನ ಕಾಣಲಿಲ್ಲ. ಈ ದಿನ ಮಳೆ ಹೆಚ್ಚಾಗಿಯೇ ಸುರಿದು ನಮ್ಮನ್ನು ತೊಪ್ಪೆ ಮಾಡಿ ಹಾಕಿತ್ತು. ಬಿಗಿಯಾದ ಮಳೆ ಬಿದ್ದಾಗ ಪ್ರಾಣಿಗಳು ಹೆಚ್ಚು ಓಡಾಡುವುದಿಲ್ಲ. ಅದರಲ್ಲೂ ಹುಲಿಗಳು ಒಂದು ಜಾಗ ಹಿಡಿದು ಕೂತರೇ ಏಳುವುದೇ ಇಲ್ಲ. ಆದರೆ, ಆನೆಗಳಿಗೆ ಮಳೆಯಲ್ಲಿ ನೆನೆಯುವುದು ಎಂದರೆ ಖುಷಿ. ಹೀಗಾಗಿ ಹೆಚ್ಚು ಆನೆಗಳ ಹಿಂಡು ಆ ದಿನ ನೋಡಲು ಸಿಕ್ಕವು. ನಾವು ಹತ್ತಿರ ಹೋದಾಗ ಒಂದು ಕೆಸರಿನ ಹೊಂಡದಲ್ಲಿ ನಿಂತು ಆಟವಾಡುತ್ತಿದ್ದ ಹಸ್ತಿಗಳ ಹಿಂಡು ತಕ್ಷಣ ಅಲರ್ಟ್ ಆಗಿ ನಮ್ಮ ಕಡೆಗೆ ನೋಡಿದವು. ಆ ಹಿಂಡಿನಲ್ಲಿ ಒಂದು ಪುಟಾಣಿ ಮರಿಯಿತ್ತು. ನಮ್ಮನ್ನು ನೋಡಿದ ಕೂಡಲೇ ಅವುಗಳು ತಕ್ಷಣ ಜಾಗೃತವಾಗಿ ತಮ್ಮ ಮರಿಯನ್ನು ತಮ್ಮೆಲ್ಲರ ಕಾಲಿನ ತೆಕ್ಕೆಗೆ ಸರಿಸಿಕೊಂಡವು. ಮರಿಯನ್ನು ನಡುವೆ ಹಾಕಿಕೊಂಡು ಸುತ್ತ ಅದಕ್ಕೆ ರಕ್ಷಣಾಬೇಲಿ ನಿರ್ಮಿಸಿಕೊಂಡವು. ಅಪಾಯದ ಅರಿವಿಲ್ಲದ ಮರಿ ಚಡಪಡಿಸುತ್ತಾ ಬಂಧನ ಕಳಚಿಕೊಂಡು ಹೊರಗೆ ಬರಲು ಹವಣಿಸುತ್ತಿತ್ತು. ಉಳಿದ ವಶಿಗಳು ಸೊಂಡಿಲಲ್ಲಿ ಮರಿಯನ್ನು ತಳ್ಳಿ, 'ಹೋಗು ಮುಂಡೇದೆ!' ಎಂದು ತಾಕೀತು ಮಾಡುತ್ತಿದ್ದವು. ಚಿನ್ನಾಟವಾಡುವ ವಯಸ್ಸಿನ ಮರಿಗೆ ಇದ್ಯಾವುದರ ಪರಿವೆಯೂ ಇರಲಿಲ್ಲ. ಮಾತೇ ಕೇಳದ ತರಲೆ ಮಗುವನ್ನು ಸಂಭಾಳಿಸಿ ತಮ್ಮ ಕಾಲುಗಳ ನಡುವೆ ಭದ್ರವಾಗಿ ಸಿಕ್ಕಿಸಿಟ್ಟುಕೊಳ್ಳುವುದು ಗಜಗಳಿಗೆ ಕಷ್ಟವಾಗುತ್ತಿತ್ತು. ಸಣ್ಣ ಅಪಾಯದ ಸೂಚನೆ ಬಂದರೂ ಇಡೀ ಗುಂಪು ಜಾಗೃತಗೊಂಡು ಮೊದಲು ಮರಿಗಳನ್ನು ಜೋಪಾನ ಮಾಡಿಕೊಳ್ಳುತ್ತವೆ. ಮರಿಗಳಿದ್ದಾಗ ಇವು ಸಿಟ್ಟಾಗುವುದು ಅತ್ಯಂತ ನಿರೀಕ್ಷಿತ. ನಮ್ಮ ಕಡೆಯಿಂದ ಕೊಂಚ ಕಿರಿಕಿರಿ, ಪ್ರಚೋದನೆ ಕಂಡು ಬಂದರೂ ದಾಳಿ ಮಾಡುವುದು ನಿಶ್ಚಿತ.

ನಾವು ಕುಂಜರಗಳ ಹಿಂಡಿನ ಕ್ರಿಯಾವಳಿಗಳ ಗಮನಿಸುತ್ತಿದ್ದಾಗಲೇ ಕಾಡಿನ ನಡುವೆಯಿಂದ ಹುಲಿ ಘರ್ಜನೆಯ ಶಬ್ದ ಕೇಳಿ ಬಂತು. ಹುಲಿ, ಗಜಪಡೆಯ ಮರಿಗಳನ್ನು ಅನೇಕ ಸಲ ಹೊಡೆದು ಹಾಕಿದ್ದನ್ನು ನೋಡಿದ್ದೇವೆ. ಬಂಡೀಪುರದಲ್ಲಿ ಮದೆಗಳ ನಡುವೆ ಕುಂಜರದ ಮರಿಯನ್ನು ಹೊಡೆದುರುಳಿಸಿದ್ದ ಹುಲಿ ಮೂರು ದಿನ ಅಲ್ಲೇ ಡೇರೆ ಹೊಡೆದು ತಿಂದು ಮುಗಿಸಿತ್ತು. ಹುಲಿಯ ಶಬ್ದ ಕಿವಿಗೆ ತಟ್ಟಿದ ತಕ್ಷಣ ಒಂದು ಕ್ಷಣವೂ ಸಮಯ ವ್ಯರ್ಥ ಮಾಡದೆ ಆನೆಗಳು ತಾವಿದ್ದ ಜಾಗವನ್ನು ತೊರೆಯತೊಡಗಿದವು. ದಂತಾವಲಗಳ ಹಿಂಡು ದೊಡ್ಡ ಪ್ರಮಾಣದಲ್ಲಿದ್ದರೆ ಹುಲಿ ಕೂಡ ನುಗ್ಗಿ ಬರಲು ಹಿಂದೇಟು ಹಾಕುತ್ತದೆ. ಒಮ್ಮೆ ನಾಗರಹೊಳೆ ಕಾಡಿನಲ್ಲಿ ನೀರು ಕುಡಿಯಲು ಬಂದ ಹುಲಿಯನ್ನು ಕರಿಗಳು ಅಟ್ಟಾಡಿಸಿಕೊಂಡು ಹೋಗಿದ್ದನ್ನು ನೋಡಿದ್ದೆ. ಒಮ್ಮೆ ಚಿರತೆಯೊಂದು ಆನೆಗಳ ಹಿಂಡಿನ ಬಳಿ ಅಚಾನಕ್ಕಾಗಿ ಬಂದು ಯಾಕಾದರೂ ಬಂದೇನೋ ಎನ್ನುವಷ್ಟು ಫಜೀತಿ ಅನುಭವಿಸಿತ್ತು. ಆಗ ಸಲಗವೊಂದು ಹಾಕಿದ ಗುಟುರಿಗೆ ಎದ್ದೆನೋ ಬಿದ್ದೆನೋ! ಎಂದು ಚಿರತೆ ಪೇರಿ ಕಿತ್ತಿತ್ತು. ●